> ಈಗಂತೂ ಹಲವು ಬಗೆಯ ಅನಾರ್ಕಲಿ ಉಡುಪುಗಳು ಮಾರುಕಟ್ಟೆಯಲ್ಲಿವೆ. ಪಾದ ಮುಚ್ಚುವ ಅನಾರ್ಕಲಿ ಈಗಿನ ಟ್ರೆಂಡ್. ಇದು ಎಲ್ಲಾ ಬಗೆಯ ದೇಹ ಪ್ರಕೃತಿಯವರಿಗೂ ಹೊಂದಿಕೆಯಾಗುತ್ತದೆ. ಸಂದರ್ಭಕ್ಕೆ ಅನುಗುಣವಾಗಿ ಈ ಉಡುಪಿಗೆ ಆಭರಣಗಳನ್ನು ಆರಿಸಿಕೊಳ್ಳಬೇಕು. ಅದ್ದೂರಿ ಕಾರ್ಯಕ್ರಮಗಳಾದರೆ ಕತ್ತಿಗೆ ಚೋಕರ್ ಮತ್ತು ಕಿವಿಗೆ ಕಾಫ್ ಚೆನ್ನಾಗಿ ಕಾಣುತ್ತದೆ. ಸರಳ ಸಮಾರಂಭಕ್ಕಾದರೆ ಹರಳುಗಳ ದೊಡ್ಡ ಕಿವಿಯೋಲೆ ಹೊಂದುತ್ತದೆ.
>
> **ನಿಶಾರ ಕಿರಣ್**, ವಸ್ತ್ರವಿನ್ಯಾಸಕಿ





ಹಾಗೆಯೇ ದುಪ್ಪಟ್ಟವೇ ಅನಾರ್ಕಲಿ ಉಡುಪುಗಳು ಆಗಿವೆ. ಗೌನ್ ಮಾದರಿಯ ಅನಾರ್ಕಲಿ ಉಡುಪುಗಳು, ಫ್ಲೋರಲ್ ಡಿಸೈನ್ ಇರುವ ಉಡುಪು ಹೆಚ್ಚು ಟ್ರೆಂಡಿ ಎನಿಸಿಕೊಂಡಿದೆ. ವಿಭಿನ್ನ ಲುಕ್‌ನೊಂದಿಗೆ ವಿಶೇಷ ವಿನ್ಯಾಸ ಹೊಂದಿರುವ ಉಡುಪುಗಳಿಗೆ ಈಗ ಬೇಡಿಕೆ ಕುದುರುತ್ತಿದೆ. ಈ ಬಗೆಯ ಉಡುಪಿನ ಬೆಲೆ ಸ್ವಲ್ಪ ದುಬಾರಿಯಾದರೂ, ಸಭೆಯಲ್ಲಿ ಎದ್ದು ಕಾಣುವಂತಹ ನೋಟ ನೀಡುವ ಸಾಮರ್ಥ್ಯ ಇದಕ್ಕಿದೆ.

ಸಿಂಥೆಟಿಕ್ ಮತ್ತು ಸಾಫ್ಟ್ ಸಿಲ್ಕ್ ಸೀರೆಗಳಿಂದ ಅನಾರ್ಕಲಿ ಶೈಲಿಯ ಲಾಂಗ್ ಕುರ್ತಾ ಸುಂದರವಾಗಿ ವಿನ್ಯಾಸ ಮಾಡಿಸಬಹುದು. ಸಪೂರವಾಗಿ ಕಾಣಲು ಬಯಸುವವರು ಈ ವಿನ್ಯಾಸವನ್ನು ಆಯ್ದುಕೊಳ್ಳಬಹುದು.

ಸೀರೆಯ ಹೊರತಾಗಿ ಸಾಂಪ್ರದಾಯಿಕ ಕಾರ್ಯಕ್ರಮಗಳಿಗೆ ಹೊಸ ಬಗೆಯ ಉಡುಪು ಧರಿಸಬೇಕು ಎಂದು ಬಯಸುವವರಿಗೆ ಇದು ಒಳ್ಳೆಯ ಆಯ್ಕೆ. ಉಡುಪಿಗೆ ತಕ್ಕಂತೆ ದುಪ್ಪಟ್ಟಾ ಆಯ್ಕೆ ಮಾಡಿಕೊಳ್ಳುವುದು ಜಾಣ್ಮೆ. ಕಾಕ್‌ಟೇಲ್, ಅಥವಾ ಸಂಜೆ ಪಾರ್ಟಿಗಳಿಗೆ ಈ ವಿನ್ಯಾಸದ ದಿರಿಸುಗಳು ಸೂಕ್ತವೆನ್ನಿಸುವುದಿಲ್ಲ.

ಹಿಂದೆಲ್ಲ ಭಾರವಾದ, ಅದ್ದೂರಿ ಕುಸುರಿ ಇರುವ ಅನಾರ್ಕಲಿ ಉಡುಪು ಹೆಚ್ಚು ಪ್ರಚಲಿತದಲ್ಲಿತ್ತು. ಆದರೀಗ ಕಾಟನ್ ಅನಾರ್ಕಲಿಯೂ ಬಹು ಜನರ ಮೆಚ್ಚುಗೆ ಗಳಿಸಿವೆ. ಧರಿಸಲು ಆರಾಮದಾಯಕವೆನ್ನಿಸುವ ಇದನ್ನು ಗರ್ಭಿಣಿಯರು ಮತ್ತು ಬಾಣಂತಿಯರು ಹೆಚ್ಚು ಇಷ್ಟಪಡುತ್ತಾರೆ.ಅದ್ದೂರಿ ವಿನ್ಯಾಸ, ಹೆಚ್ಚು ನೆರಿಗೆಗಳಿರುವ ಅನಾರ್ಕಲಿ ಉಡುಗೆಗಳನ್ನು ಸಂಭಾಳಿಸುವುದು ತುಸು ಕಷ್ಟ. ಸಂಭಾಳಿಸಲು ಸಾಮರ್ಥ್ಯವಿದ್ದರೆ ಮಾತ್ರ ಈ ಬಗೆಯ ವಿನ್ಯಾಸ ಆರಿಸಿಕೊಳ್ಳಿ. ಹಗುರವಾದ ಫ್ಯಾಬ್ರಿಕ್‌ಗಳಿಂದ ತಯಾರಿಸುವ ಅನಾರ್ಕಲಿ ಧರಿಸಿದರೆ ಕಿರಿಕಿರಿ ಆಗುವುದಿಲ್ಲ. ಎಲ್ಲಾ ವಯೋಮಾನದವರೆಗೂ ಹೊಂದಿಕೆಯಾಗುವುದು ಇದರ ಹೆಗ್ಗಳಿಕೆ. ಈ ದಿರಿಸಿನೊಂದಿಗೆ ಧರಿಸಲು ಆಭರಣಗಳ ಆಯ್ಕೆಗೆ ತಲೆ ಕೆಡಿಸಿಕೊಳ್ಳಬೇಕಿಲ್ಲ.

ಚಿನ್ನ, ಬೆಳ್ಳಿ ಅಥವಾ ಆಕ್ಸಿಡೈಸ್ಡ್ ವಿನ್ಯಾಸದ ಆಭರಣಗಳೂ ಒಪ್ಪುತ್ತವೆ. ಆದರೆ ಉಡುಪಿ ಶೈಲಿ, ಬಣ್ಣಕ್ಕೆ ಹೊಂದುವಂತೆ ಆಯ್ಕೆಯಿರಬೇಕು.ಮಣಿಗಳಿಂದ ಮಾಡಿದ ಆಭರಣಗಳು ವಿಶೇಷ ನೋಟ ನೀಡಬಲ್ಲವು. ಜುಮುಕಿಯಂತಹ ಕಿವಿ ಓಲೆಗಳು ಹೊಂದಿಕೆಯಾಗುತ್ತವೆ.

ದೇಹ ಪ್ರಕೃತಿಗೆ ಅನುಗುಣವಾಗಿ ಅನಾರ್ಕಲಿ ಧರಿಸಿದರೆ ಚೆನ್ನ. ಸಪೂರ, ದಪ್ಪಗಿರುವವರು, ಕುಳ್ಳಗಿರುವವರು ಅವರಿಗೆ ಹೊಂದಿಕೆಯಾಗುವಂತಹ ವಿನ್ಯಾಸವನ್ನು ಆಯ್ದುಕೊಳ್ಳಬೇಕು. ದಪ್ಪಗಿರುವವರು ತಿಳಿ ಬಣ್ಣದ, ಕಡಿಮೆ ಅಂಚಿನ ಅನಾರ್ಕಲಿ ಆರಿಸಿಕೊಳ್ಳಿ. ಹಾಗೆಯೇ ಅದು ಡೀಪ್ ನೆಕ್ ಇರದಿದ್ದರೆ ಒಳಿತು. ನೆರಿಗೆಯೂ ಕಡಿಮೆ ಇರಲಿ. ಸಪೂರ, ಉದ್ದವಿರುವವರಿಗೆ ಯಾವ ಬಗೆಯ ಅನಾರ್ಕಲಿಯಾದರೂ ಚೆನ್ನಾಗಿ ಕಾಣುತ್ತದೆ. ■